157ಪ್ರ = 137
ಎರ
030126

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ, ಮಾದೇಗೌಡ ರವರ ನಿಯಮ 72 ರಡಿ ಕೋರಿರುವ ಸೂಚನೆ ಸಂಖ್ಯೆ:137 ಕ್ಕೆ ಉತ್ತರ**

**ವಿಷಯ:** ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಳೆದ ಒಂದು ವರ್ಷದಿಂದ ಸಾಮಾಗ್ರಿ ಸರಬುರಾಜದಾರರಿಗೆ ಹಣ ಪಾವತಿಸದಿರುವುದರಿಂದ ತೀವ್ರ ತೊಂದರೆಯಾಗಿದ್ದು ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಅನುದಾನ ಪಾವತಿ ಆಗದಿರುವುದರಿಂದ ಸಾಮಗ್ರಿ ವೆಚ್ಚಾಧರಿತ ಅಭಿವೃದ್ಧಿ ಕಾಮಗಾರಿಗಳ ಮೇಲೆ ನೇರ ಪರಿಣಾಮವನ್ನುಂಟು ಮಾಡಿದ್ದು ಅಭಿವೃದ್ಧಿಗೆ ಹಿನ್ನಡೆ ಆಗಿರುತ್ತದೆ. ಹಾಗಾಗಿ, ಶೀಘ್ರ ಸಾಮಗ್ರಿ ಸರಬರಾಜುದಾರರಿಗೆ ಹಣ ಪಾವತಿಸುವ ಕುರಿತು ನಿಯಮ 72 ರಡಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರ ಗಮನ ಸೆಳೆಯುತ್ತೇನೆ.

********

**ಉತ್ತರ:** ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಆರ್ಥಿಕ ವರ್ಷ 2025-26 ರ ಜುಲೈ 01 ನೇ ತಾರೀಖಿನಿಂದ ಪ್ರಪ್ರಥಮ ಬಾರಿಗೆ SNA-SPARSH ಜಾರಿಗೆಬಂದಿದ್ದು ರಾಜ್ಯದ 5958 ಗ್ರಾಮ ಪಂಚಾಯತಿಗಳನ್ನು ಈಗಾಗಲೇ SNA-SPARSH ವ್ಯಾಪ್ತಿಯಡಿಯಲ್ಲಿ DDO Mapping ಮಾಡಲಾಗಿದ್ದು, NREGA soft ಹಾಗೂ Treasury Khajane ತಂತ್ರಾಂಶಗಳಿಗೆ Integration ಮಾಡಲಾಗಿರುತ್ತದೆ. ಅದರಂತೆ ಸಾಮಾಗ್ರಿ ಅನುದಾನವನ್ನು SNA-SPARSH ತಂತ್ರಾಂಶದಡಿಯಲ್ಲಿ ರಾಜ್ಯದ ತಾಲ್ಲೂಕು/ಗ್ರಾಮ ಪಂಚಾಯತಿಗಳ DDO ಗಳಿಗೆ ಹಂಚಿಕೆ ಮಾಡಿ SNA-SPARSH ತಂತ್ರಾಂಶದಡಿ ನರೇಗಾ ಯೋಜನೆಯಡಿಯಲ್ಲಿನ ವೆಚ್ಚಗಳನ್ನು ಖಜಾನೆ ಮೂಲಕ ಭರಿಸಲಾಗುತ್ತಿದ್ದು, ಅದರಂತೆ ಗ್ರಾಮ ಪಂಚಾಯತಿಗಳಲ್ಲಿ FTO Creation, Bill Preparation ಮಾಡುವಾಗ ತಾಂತ್ರಿಕ ಸಮಸ್ಯೆಗಳು ಉದ್ಭವಿಸಿದ್ದು, ಇದರಲ್ಲಿ ಹೆಚ್ಚಿನ ಸಮಸ್ಯೆಗಳನ್ನು ಪರಿಹರಿಸಲಾಗಿದ್ದು, NIC ಹಾಗೂ ಖಜಾನಾಧಿಕಾರಿಗಳೊಂದಿಗೆ ಕಾಲಕಾಲಕ್ಕೆ ಸಮಸ್ಯೆಯ ಕುರಿತು ಪರಿಹಾರಕ್ಕಾಗಿ ವ್ಯವಹರಿಸಿ, ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ.

ಮುಂದುವರೆದು, ಸಾಮಾಗ್ರಿ ಅನುದಾನಕ್ಕೆ ಸಂಬಂಧಿಸಿದಂತೆ, 2025-26 ನೇ ಸಾಲಿಗೆ ಆರಂಭಿಕ ಶಿಲ್ಕು ರೂ: 69.92 ಕೋಟಿಗಳಿದ್ದು, ಪ್ರಸ್ತುತ ಸಾಲಿಗೆ ಕೇಂದ್ರ ಸರ್ಕಾರದಿಂದ ರೂ 323.57 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ. 107.86 ಕೋಟಿ ಅನುದಾನವು ಸೇರಿದಂತೆ ಒಟ್ಟು ಮೊತ್ತ ರೂ: 501.37 ಕೋಟಿ ಬಿಡುಗಡೆಯಾಗಿದ್ದು, ಗ್ರಾಮ ಪಂಚಾಯತಿಗಳಿಗೆ ಸಾಮಾಗ್ರಿ ವೆಚ್ಚಗಳನ್ನು ಭರಿಸಲು ರೂ. 490.60 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

**ಸಂಖ್ಯೆ: RDC-EGS/1003(30)/2025**

**(ಪ್ರಿಯಾಂಕ್ ಖರ್ಗೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**
**ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ**
**ತಂತ್ರಜ್ಞಾನ ಸಚಿವರು**